ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕಃ 10.03.2015

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿಹೆಚ್ ವಕೀಲರಿಂದಃ

ನಾನು ಮತ್ತು 4ನೇ ವಾದಿ ಹಾಗೂ ನನ್ನ ತಾಯಿ 1ನೇ ಪ್ರತಿವಾದಿ ನಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಪಾಲುವಿಭಾಗ ಮಾಡಿಕೊಂಡು ನಮ್ಮ ನಮ್ಮ ಹಿಸ್ಸೆಗೆ ಬಂದ ಜಮೀನುಗಳ ಕುರಿತು ಹಕ್ಕು ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಮ್ ಸಂಖ್ಯೆ .1 ಮತ್ತು 3 ಹಾಗೂ ಸರ್ವೆ ನಂಬರ್.6/ಡಿ ರಲ್ಲಿ 87 ಸೆಂಟ್ಸ್ , ಸ.ನಂ.84/ಬಿ ರಲ್ಲಿ 1 ಎಕರೆ ಸದರಿ ಜಮೀನು ನನ್ನ ಮತ್ತು 4ನೇ ವಾದಿ ನಾಗಪ್ಪನ ಹಿಸ್ಸೆಗೆ ಬಂದ ಜಮೀನುಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಮ್ ಸಂಖ್ಯೆ.2 ರಲ್ಲಿನ ಉಳಿದ ಆಸ್ತಿಯು ನನ್ನ ತಾಯಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಾವು ಪಾಲುವಿಭಾಗ ಮಾಡಿಕೊಂಡ ನಂತರ ನಮ್ಮ ನಮ್ಮ ಹಿಸ್ಸೆಗೆ ಬಂದ ಜಮೀನುಗಳಲ್ಲಿ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. 4ನೇ ವಾದಿ ನನ್ನ ಅಣ್ಣ ಇರುತ್ತಾನೆ. 4ನೇ ವಾದಿ ನನ್ನ ಅಣ್ಣ ನಾಗಪ್ಪ ಇತನು ದಿ.15.05.1995 ರಂದು ಸ.ನಂ.84/ಬಿ ರಲ್ಲಿ 1 ಎಕರೆ ಜಮೀನನ್ನು ಚೌಟಗಿ ಗುರುಪಾದಪ್ಪ ತಂದೆ ಅಡವಿಬಸಪ್ಪ ಇವರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು ನನ್ನ ತಾಯಿಯು ಮಾರಾಟ ಮಾಡಿರುತ್ತಾಳೆ ಎಂದು ಹೇಳುತ್ತಾರೆ. ಕುಂಬಾರ ಹಾಲಪ್ಪ ಇವರ ಮಗ 30 ವರ್ಷದ ನಾಗರಾಜಪ್ಪ ಎಂದರೆ ಯಾರು ಎಂದರೆ ಸಾಕ್ಷಿಯು ನನ್ನ ಅಣ್ಣ ಇರುತ್ತಾನೆ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ನನ್ನ ತಾಯಿಯು ಸದರಿ ಚೌಟಗಿ ಗುರುಪಾದಪ್ಪ ಇವರಿಗೆ ಮಾರಾಟ ಮಾಡಿದ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದಾಗ ನನ್ನ ತಾಯಿಯು ಮಾರಾಟ ಮಾಡಿರುತ್ತಾಳೆ ಎಂದು ಹೇಳುತ್ತಾರೆ. ಸದರಿ ಮಾರಾಟ ಮಾಡುವುದಕ್ಕಿಂತ ಪೂರ್ವದಲ್ಲಿ ನಾನು ಮತ್ತು 4ನೇ ವಾದಿ ಮತ್ತು ನನ್ನ ತಾಯಿ ಪಾಲುವಿಭಾಗ ಮಾಡಿಕೊಂಡಿದ್ದೇವು ಆದ್ದರಿಂದ 4ನೇ ವಾದಿಯು ಹಿಸ್ಸೆಗೆ ಬಂದ ಜಮೀನನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನಗೆ ಓದಲು ಮತ್ತು ಬರೆಯಲು ಬರುತ್ತದೆ.

ನನ್ನ ಅಣ್ಣ 4ನೇ ವಾದಿಯು ಬರೆದುಕೊಟ್ಟ ಕ್ರಯ ಪತ್ರದ ಜಮೀನಿನ ಚೆಕ್ಕುಬಂದಿಯಲ್ಲಿ ದಕ್ಷಿಣ ದಿಕ್ಕಿಗೆ ಇದೇ ಪೈಕಿ ಗಂಗಮ್ಮಳ ಹೊಲ ಇರುತ್ತದೆ ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ಕ್ರಯ ಪತ್ರಕ್ಕೆ ನಾನಾಗಲೀ ಅಥವಾ ನನ್ನ ತಾಯಿಯಾಗಲೀ ಪಕ್ಷಗಾರರಾಗಿ ಸಹಿ ಮಾಡಿರುವುದಿಲ್ಲ ಮತ್ತು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಸದರಿ ಮಾರಾಟ ಮಾಡಿದ ಜಮೀನನ್ನು ನಾನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 4ನೇ ವಾದಿ ನನ್ನ ಅಣ್ಣ ಸ.ನಂ.6/ಡಿ ರಲ್ಲಿ 87 ಸೆಂಟ್ಸ್ ಜಮೀನನ್ನು ರೇವಣಸಿದ್ದಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನನ್ನ ತಾಯಿಯು ಮಗಳ ಮದುವೆಯನ್ನು ಮಾಡುವ ಸಲುವಾಗಿ ಮಾರಾಟ ಮಾಡಿರುತ್ತಾಳೆ ಎಂದು ಹೇಳುತ್ತಾರೆ. ಸ.ನಂ.6/ಡಿ 1992-93 ನೇ ಸಾಲಿನಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. 1992-93 ನೇ ಸಾಲಿನಲ್ಲಿ ಕುಂಬಾರ ಹಾಲಪ್ಪ ಇವರ ಹೆಸರು ರೌಂಡಫ್ ಆಗಿ ನನ್ನ ಮತ್ತು ನನ್ನ ಅಣ್ಣ ನಾಗರಾಜಪ್ಪ ಇವರ ಹೆಸರು ಸ.ನಂ.6/ಡಿ

ರ ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನಾವು ನಮ್ಮ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿಸಿರುವುದಿಲ್ಲ ಎಂದು ಹೇಳುತ್ತಾರೆ. 1992-93 ನೇ ಸಾಲಿನಿಂದ 1997-98 ನೇ ಸಾಲಿನವರೆಗೆ ಸದರಿ ಆಸ್ತಿಯ ಪಹಣಿ ಪತ್ರಿಕೆಗಳಲ್ಲಿ ನನ್ನ ಮತ್ತು ನನ್ನ ಅಣ್ಣ ನಾಗರಾಜಪ್ಪನ ಹೆಸರಿನಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನಾಗರಾಜಪ್ಪ ರೇವಣಸಿದ್ದಪ್ಪ ಎಂಬುವವರಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದರಿಂದ ನಮ್ಮ ಹೆಸರು ಕಡಿಮೆಯಾಗಿ ಸದರಿ ರೇವಣಸಿದ್ದಪ್ಪ ಇವರ ಹೆಸರು 1998-99 ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ನಮೂದಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ನಾಗರಾಜಪ್ಪ ಸ.ನಂ.6/ಡಿ ಆಸ್ತಿಯನ್ನು ರೇವಣಸಿದ್ದಪ್ಪ ಎಂಬುವವರಿಗೆ ಮಾರಾಟ ಮಾಡಿದ್ದರೂ ಸಹ ನನ್ನ ತಾಯಿಯ ಮಾರಾಟ ಮಾಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.6/ಡಿ , ಸ.ನಂ.84/ಬಿ ರಲ್ಲಿನ 1 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ನಾಗರಾಜಪ್ಪ ಮತ್ತು ನನ್ನ ತಾಯಿ ಪಾಲುವಿಭಾಗ ಮಾಡಿಕೊಂಡ ನಂತರ ನನ್ನ ತಾಯಿ ಪ್ರತ್ಯೇಕವಾಗಿ ವಾಸ ಇರುತ್ತಾಳೆ ಎಂದರೆ ಸರಿಯಲ್ಲ.

ನನ್ನ ತಾಯಿಯು ನನ್ನ ಮತ್ತು ನನ್ನ ಅಣ್ಣನ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿರುತ್ತಾಳೆ ಎಂದರೆ ಸರಿ. ನನ್ನ ತಾಯಿಗೆ ವಯಸ್ಸಾಗಿದ್ದರಿಂದ ದುಡಿಯುವ ಶಕ್ತಿ ಇರುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ನನ್ನ ತಾಯಿಯನ್ನು ಸರಿಯಾಗಿ ನೋಡಿಕೊಳ್ಳದೇ ಇರುವುದರಿಂದ ದಿ.17.01.2011 ರಂದು ರೂ.68 ಸಾವಿರ ರೂಪಾಯಿಗಳಿಗೆ ತನ್ನ ಪಾಲಿಗೆ ಬಂದ ಜಮೀನನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾಳೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗದ ರೀತಿಯಲ್ಲಿ ಮಾರಾಟ ಮಾಡಿರುತ್ತಾಳೆ ಎಂದು ಹೇಳುತ್ತಾರೆ. 2ನೇ ಪ್ರತಿವಾದಿ ರೇಣುಕಮ್ಮ ಇವಳು ನನ್ನ ತಾಯಿಯಿಂದ ಖರೀದಿಸಿದ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಮ್ ಸಂಖ್ಯೆ.2 ಆಸ್ತಿಗೆ ನನಗಾಗಲೀ ಅಥವಾ ನನ್ನ ಅಣ್ಣನಿಗಾಲೀ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಚೌಟಗಿ ಗುರುಪಾದಪ್ಪ ತಂದೆ ಅಡವಿಬಸಪ್ಪ ಹಾಗೂ ರೇವಣಸಿದ್ದಪ್ಪ ಇವರುಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಗೆ ಬಂದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು 4ನೇ ವಾದಿ ನನ್ನ ಅಣ್ಣ ಕೂಡಿಕೊಂಡ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿದ 4 ತಿಂಗಳುಗಳ ನಂತರ ನನಗೆ ಗೊತ್ತಾಗಿರುತ್ತದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಮ್ ಸಂಖ್ಯೆ.2 ರಲ್ಲಿನ 1 ಎಕರೆ ಜಮೀನಿನಲ್ಲಿ ಚೌಟಗಿ ಗುರುಪಾದಪ್ಪ ಇತನು ಬಿತ್ತುವುದು ಬೆಳೆಯುವುದನ್ನು ಮಾಡುತ್ತಾನೆ ಎಂದರೆ ಸರಿ. ಅದೇ ರೀತಿ ಸ.ನಂ.6/ಡಿ 87 ಸೆಂಟ್ಸ್ ಜಮೀನಿನಲ್ಲಿ ರೇವಣಸಿದ್ದಪ್ಪ ಇತನು ಬಿತ್ತುವುದು ಬೆಳೆಯುವುದನ್ನು ಮಾಡುತ್ತಾನೆ ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ಅಣ್ಣ ಮಾರಾಟ ಮಾಡಿದ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ

ಸರಿಯಲ್ಲ. ನನ್ನ , ನನ್ನ ಅಣ್ಣ 4ನೇ ವಾದಿ ಹಾಗೂ ನನ್ನತಾಯಿ 1ನೇ ಪ್ರತಿವಾದಿ ದಾವಾ ಆಸ್ತಿಗಳಲ್ಲಿ ಈಗಾಗಲೇ ಪಾಲುವಿಭಾಗ ಮಾಡಿಕೊಂಡಿದ್ದರಿಂದ ಪುನಹಃ ದಾವಾ ಆಸ್ತಿಗಳಲ್ಲಿ ಹಿಸ್ಸೆಯನ್ನು ಕೇಳಿ ದಾವೆಯನ್ನು ಸಲ್ಲಿಸುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.